

# ನೀಳಾದೇವಿ

ಕಾದಂಬರಿಕಾರ್ತಿ ನೀಳಾದೇವಿ ಮೈಸೂರಿನವರು. ತಂದೆ ಕೆ.ಎಸ್. ರಾಮಸ್ವಾಮಿ, ತಾಯಿ ರುಕ್ಮಿಣಿಯಮ್ಮ. ಬಾಲ್ಯದಿಂದಲೇ ಬರವಣಿಗೆಯತ್ತ ಆಕರ್ಷಿತರಾದ ನೀಳಾದೇವಿ ಬರೆದು ಪ್ರಕಟಿಸಿದ ಮೊದಲ ಕತೆ 'ಕಳ್ಳಬೊಮ್ಮ'. ಇಲ್ಲಿಯವರೆಗೆ ಸುಮಾರು 35 ಪುಸ್ತಕಗಳನ್ನು ಪ್ರಕಟಿಸಿರುವ ಅವರು ಹೆಚ್ಚಾಗಿ ಬರೆದಿರುವುದು ಕಾದಂಬರಿಗಳನ್ನು. 'ಬೇಡಿ ಬಂದವಳು', 'ಅನುರಾಧ', 'ಒಲವಿನ ಜಾಲ', 'ಮೂಕರಾಗ', 'ಅನುರಾಧ' 'ಕಣ್ಣುಮುಚ್ಚಾಲೇ', 'ಜೀವನ ಹೆಜ್ಜೆ', 'ಕಪಿಮುಷ್ಟಿಲಿ ಕಡ್ಲೆಕಾಯಿ' ಓದುಗರ ಮೆಚ್ಚುಗೆಯನ್ನು ಪಡೆದಿವೆ. 'ನಾ ಕಂಡ ಆ ಖಂಡ', 'ಸಬಲನ ವಿದೇಶ ಯಾತ್ರೆ' ಅವರು ಅಮೆರಿಕ, ಕೆನಡಾ ದೇಶಗಳಿಗೆ ಹಲವು ಬಾರಿ ಭೇಟಿ ಕೊಟ್ಟದ್ದರ ಅನುಭವಕಥನಗಳಾಗಿವೆ.

ಕತೆಗಳನ್ನೂ ಬರೆದಿರುವ ನೀಳಾದೇವಿ ಅವರು 'ರೂಪದಾಹ', 'ಅಲೆಯ ಆಟ', 'ಮಾಣಿಕ್ಯ', 'ಹೆಜ್ಜೆ', 'ಕಾಮನ ಬಿಲ್ಲು' ಎಂಬ ಕಥಾ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಆಪ್ತದಾಟಿಯಲ್ಲಿ ಜೀವನದ ಚಿತ್ರಣ ಕೊಡುವ ನೀಳಾದೇವಿ ಅವರ ಬರಹಗಳು ಓದುಗರ ನಿರೀಕ್ಷೆಯನ್ನು ಹುಸಿಗೊಳಿಸದೆ ಅವರಿಗೆ ಆಪ್ತವಾಗುತ್ತಿದ್ದವು.

ಅವರ ಕಾದಂಬರಿ 'ಬೇಡಿ ಬಂದವಳು' ಸಿ. ಶ್ರೀನಿವಾಸ್ ನಿರ್ದೇಶನದಲ್ಲಿ ಸಿನಿಮಾ ಆಯಿತು. ಇದರಲ್ಲಿ ಕಲ್ಯಾಣಕುಮಾರ್, ಕಲ್ಪನಾ, ಮೈನಾವತಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದರು. ಇದೇ ಸಿನಿಮಾದ 'ನೀರಿನಲ್ಲಿ ಅಲೆಯ ಉಂಗುರಾ, ಭೂಮಿ ಮೇಲೆ ಹೂವಿನುಂಗುರಾ, ಮನಸೆಳೆದ ನಲ್ಲೆ ಕೊಟ್ಟಳಲ್ಲಾ ಕೆನ್ನೆ ಮೇಲೆ ಪ್ರೇಮದುಂಗುರಾ' ಎಂಬ ಹಾಡು ಇಂದಿಗೂ ಚಿತ್ರರಸಿಕರು ಗುನುಗುವ ಗೀತೆಯಾಗಿದೆ. ಈ ಸಿನಿಮಾ ತಮಿಳಿನಲ್ಲಿ 'ಶಾಂತನಿಲಯಂ' ಎಂಬ ಹೆಸರಿನಲ್ಲಿ ತೆರೆಕಂಡಿತು. ಈ ಕತೆ ಚಿತ್ರ ಬರೆದವರು ಜಿ. ಶ್ರೀನಿವಾಸಮೂರ್ತಿ.

ತಿಂಗಳಾನುಗಟ್ಟಲೆಯಾಯಿತು. ಅವನದ್ದಂತೂ ಸುದ್ದಿ ಸಮಾಚಾರವಿಲ್ಲ. ಇಲ್ಲಿ ಇದ್ದಷ್ಟು ದಿನ, ಇದ್ದ ಬದ್ದ ತಳ ಅಂಟಿಹೋದ ಷಡ್ಡಕ ಮಿಗಿಸಿದ್ದ ಮಾವನ ಸೀಕಲು ಆಸ್ತಿಯನ್ನೂ ಇವನು ಕೆರೆದು ಹಾಕಿದ. ಹಳ್ಳಿವಾಸದ ಸುಖ ನೀಗಿಕೊಂಡು ಹೊಟ್ಟೆಪಾಡಿಗೆ ಸಮೀಪದ ಪಟ್ಟಣ ಬಂದು ಸೇರಿಕೊಂಡ ವಿಧವೆ ವನಜಳ ಹಿಂದೆ ನಿರುದ್ಯೋಗಿಯಾಗಿ ತಾನೂ ಸದಾ ಮನೆ ಸೇರಿಕೊಂಡು ವರ್ಷೇ ವರ್ಷೇ ಆ ಮನೆಯಲ್ಲಿ ಹೊಸ ಜೀವದ ಉತ್ಪತ್ತಿ ಮಾತ್ರ ನಡೆಸುತ್ತಾ ಹೋಗುತ್ತಿದ್ದ. ಆದರೆ ಜಾನಕಿ ಹೆತ್ತ ಮೂರು ತಿಂಗಳಲ್ಲಿ ಮಕ್ಕಳು ಏನಾದರೊಂದು ಕಾಯಿಲೆ ನೆವವಾಗಿ ರೈಲುಕಂಬಿಯಾಚೆ ಬೈಲಿನಲ್ಲಿ ದೊಡ್ಡಮ್ಮನ ಕೈಲೇ ಭೂಮಿಕೆತ್ತಿಸಿಕೊಂಡು ಹಳ್ಳದಲ್ಲಿ ಹುದುಗಿ